ಬೆಳಿಗ್ಗೆಯೇ ಅಹಲ್ಯಬಾಯಿ ಬಚ್ಚಲಮನೆಗೆ ಹೋದವರು ತಲೆ ತಿರುಗಿ ಧಡಂ ಅಂತ ಬಿದ್ದು ಬಿಟ್ಟಿದ್ದು ಆಕೆಯ ಪುಣ್ಯಕ್ಕೆ ಬಚ್ಚಲಮನೆಯ ಚಿಲಕ ಸರಿಯಾಗಿ ಹಾಕಿಲ್ಲದ್ದರಿಂದ ಬಚಾವಾದರು. ತಕ್ಷಣ ರಾಯರು ಅವರ ತಾಯಿ ಇಬ್ಬರೂ ಆಕೆಯನ್ನು ಎತ್ತಿಕೊಂಡು ಹೋಗಿ ಮಲಗಿಸಿ, ಹಾಗೇ ಸ್ವಲ್ಪ ಹೊತ್ತಾದಮೇಲೆ ಆಸ್ಪತ್ರೆಗೆ ಅಡ್ಮಿಟ್ ಮಾಡಿಸಿದರು. ನಿತ್ರಾಣದಿಂದಾಗಿ ಅವರಿಗೆ ಜ್ಞಾನವೇ ಇರಲಿಲ್ಲ. ಡ್ರಿಪ್ಸ್ ಹಾಕಿ, ಸಲೈನ್ ಕೊಟ್ಟು, ಸ್ವಲ್ಪ ತ್ರಾಣ ಬಂದಮೇಲೆ ಡಾಕ್ಟರು ಅವರನ್ನ ಎಲ್ಲ ತರಹ ಟೆಸ್ಟ್‌ಗಳಿಗೂ ಒಳಪಡಿಸಿದರು. ಇದರಿಂದ ಗೊತ್ತಾದ ವಿಷಯ ಏನೂ ಅಂದರೆ ಆಕೆಯ ಹೊಟ್ಟೆಯಲ್ಲಿ ಯಾವ ಜೀವವೂ ಇಲ್ಲ ಅಂತ! ಈ ಸಂಗತಿ ರಾಯರ ಅಂತರಾಳಕ್ಕೆ ಗೊತ್ತಿದ್ದ ಸಂಗತಿಯೇ!

ಅಷ್ಟು ಊದಿಕೊಂಡಿದ್ದ ಹೊಟ್ಟೆಯ ಪಾಡು? ಮತ್ತೆ ಡಾಕ್ಟರು ಎಕ್ಸ್‌ರೇ ಎಲ್ಲಾ ಮಾಡಿಸಿ, ಕಡೇಗೆ ತುರಂತದಲ್ಲಿ 'ಆಪರೇಷನ್ ಮಾಡಲೇಬೇಕು, ಇಲ್ಲದಿದ್ದರೆ ಜೀವಕ್ಕೂ ಅಪಾಯ, ಒಂದು ಗಳಿಗೇನೂ ತಡಮಾಡೋಹಾಗಿಲ್ಲ' ಅಂದು, ಅಹಲ್ಯಬಾಯಿ ಆ ಗಳಿಗೆಯಲ್ಲಿ ಕಣ್ಬಿಟ್ಟರೂ ಲೆಕ್ಕಿಸದೆ ಓಟೀಗೆ ಕರೆದುಕೊಂಡು ಹೋದರು.

ಡಾಕ್ಟರು ಸಿಂಪಲ್ ಓಪಿ ಅಂದುಕೊಂಡಿದ್ದು ಮೂರೂವರೆ ಗಂಟೆ ಆಪರೇಷನ್ ಆಗಿ ಅಹಲ್ಯಬಾಯಿಯ ಹೊಟ್ಟೆಯಿಂದ ಹೊರ ಬಿದ್ದದ್ದು ಸುಮಾರು ಫುಟ್‌ಬಾಲ್ ಸೈಜಿನ ಕೂದಲು ಚೆಂಡು. ತಿಂಗಳು, ತಿಂಗಳು, ವರ್ಷಗಳಿಂದ ಆಕೆ ಕಿತ್ತು, ಕಿತ್ತು ನುಂಗಿದ್ದ ಕೂದಲು ಒಂದಕ್ಕೊಂದು ಸೇರಿ ಚೆಂಡಾಗಿ, ಅರಗಲೂ ಆಗದೆ, ಹೊರ ಹೋಗಲೂ ಆಗದೆ ಅಲ್ಲೇ ಸಿಕ್ಕಿಕೊಂಡು ಹೊಸ ಹೊಸ ಕೂದಲುಗಳನ್ನು ಸೇರಿಸಿಕೊಂಡು ಬೆಳೆಯುತ್ತಲೇ ಹೋಗಿತ್ತು! 'ಇಷ್ಟು ದಿನ ಈಕೆಗೆ ಏನೂ ಅಪಾಯ ಆಗಿಲ್ಲವಲ್ಲ ಅದೇ ಆಶ್ಚರ್ಯ' ಅಂದ್ರು ಡಾಕ್ಟರು!

ನಂತರದಲ್ಲಿ ಡಾಕ್ಟರಿಂದ ತಿಳಿದು ಬಂದಿದ್ದೇನೆಂದರೆ ಇದು ಒಂದು ತರಹ ಮಾನಸಿಕ ಕಾಯಿಲೆ. ಖಿನ್ನತೆಯಿಂದ ಬರುವಂತಹದ್ದು – 'ಟ್ರೈಕೋಟಿಲೋಮೇನಿಯ', ಅಂದರೆ ಕೂದಲನ್ನ ಕಿತ್ತು, ಕಿತ್ತು, ಕಡೇಗೆ ಅದನ್ನೇ ತಿನ್ನುವ ಕಾಯಿಲೆ ಅಂತ! ಹೊಟ್ಟೆಯಲ್ಲಿ ಹೋಗಿ ಸೇರಿ ಗಂಟಾಗಿ ಕಡೇಗೆ ನಿತ್ರಾಣ ಆಗೋದು ಗ್ಯಾರಂಟಿ ಅಂದರು ಡಾಕ್ಟರು.

ಶ್ರೀನಿವಾಸರಾಯರಿಗೆ ಅಲ್ಪಸ್ವಲ್ಪ ಮನಃಶಾಸ್ತ್ರ ತಿಳಿದಿದ್ದರಿಂದ 'ಮಗೂನೂ ಇಲ್ಲ, ಎಂತಹದ್ದೂ ಇಲ್ಲ, ಟ್ರೈಕೋಟಿಲೋಮೇನಿಯಾ, ಇನ್ನು ಮುಂದೆ ಯಾವ ಮೇನಿಯಾನೋ, ನನ್ನ ಕರ್ಮಕ್ಕೆ' ಅಂದುಕೊಳ್ಳುತ್ತ ಡಿಸ್‌ಛಾರ್ಜ್ ಮಾಡಿಸಿಕೊಂಡು ಮನೆಗೆ ಹೋದರು.

## ಕೃಷ್ಣಮೂರ್ತಿ ಚಂದರ್

ಇಂಗ್ಲಿಷ್ ಅಧ್ಯಾಪಕರಾದ ಕೃಷ್ಣಮೂರ್ತಿ ಚಂದರ್ 20ಕ್ಕೂ ಹೆಚ್ಚು ಪುಸ್ತಕಗಳನ್ನು ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಕಟಿಸಿದ್ದಾರೆ. ¡ಇದರಲ್ಲಿ ಕತೆ, ನಾಟಕ ಮತ್ತು ವಿಮರ್ಶೆಯ ಪುಸ್ತಕಗಳು ಸೇರಿವೆ. ಅವರು ಕೆಲವು ಅನುವಾದಗಳನ್ನೂ ಮಾಡಿದ್ದಾರೆ. 'ನವ್ಯೋತ್ತರ ವಿಮರ್ಶೆ' ಅವರ ಇತ್ತೀಚಿನ ಪುಸ್ತಕ. ಪ್ರಸ್ತುತ ಮೈಸೂರಿನಲ್ಲಿ ನೆಲೆಸಿದ್ದಾರೆ.